**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಕೋಲಾರ**

**ಸಮತೆಯೆಡೆಗೆ ನಮ್ಮ ನಡಿಗೆ**

**ಪಡೆಯದೆ ಬಿಡೆವು ಬೆವರಿಗೆ ಬೆಲೆ, ನೆಲೆ**

**ಕತ್ತರಿಸಲು ಬಿಡೆವು ಸತ್ಯದ ನಾಲಿಗೆ**

**ಮಾರ್ಚ್ 1–8: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಪ್ತಾಹ, ಕೋಲಾರ**

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಎಂಟು ವರ್ಷಗಳಿಂದ ಕರ್ನಾಟಕದ ನಾನಾ ಕಡೆ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣ ಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ, ದಮನಿತರ ಸಂಘಟನೆಗಳು, ಅಂಗನವಾಡಿ–ಪೌರಕಾರ್ಮಿಕರು–ಬಿಸಿಯೂಟ ನೌಕರರು–ಆಶಾ ಕಾರ್ಯಕರ್ತೆಯರು–ಗಾರ್ಮೆಂಟ್ ಮತ್ತು ಪೌರಕಾರ್ಮಿಕರ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕ್ಯಾಡೆಮಿಕ್ ವಲಯದ ಸಮಾನಮನಸ್ಕರೇ ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದಲ್ಲಿ ಭಾಗಿಯಾಗಿವೆ. ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದಲ್ಲಿ ಭಾಗಿಯಾಗಬಹುದಾಗಿದೆ.

2012ನೇ ಇಸವಿಯಲ್ಲಿ ದೆಹಲಿಯ ನಿರ್ಭಯ ಅತ್ಯಾಚಾರ ಪ್ರಕರಣ ಸಂಭವಿಸಿ ದೇಶಾದ್ಯಂತ ಪ್ರತಿಭಟನೆ ಭುಗಿಲೆದ್ದ ವೇಳೆಯಲ್ಲಿ ಕ.ರಾ.ಮ.ದೌ.ವಿ. ಒಕ್ಕೂಟದ ರಚನೆಯಾಯಿತು. ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ, ಲಿಂಗ ತಾರತಮ್ಯ, ಅಸಮಾನತೆಗಳನ್ನು 'ಇನ್ನು ಸಾಕು' ಎಂದು ಪ್ರತಿರೋಧಿಸುತ್ತ ಮಂಗಳೂರಿನಲ್ಲಿ 2013ರಲ್ಲಿ ಮೊದಲ ಸಮಾವೇಶ ನಡೆಯಿತು. ಅಲ್ಲಿಂದ ಪ್ರತಿವರುಷ ಒಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಮಹಿಳಾ ಚೈತನ್ಯ ದಿನ'ವಾಗಿ ಆಚರಿಸುತ್ತ, ಮಹಿಳಾ ಜಾಗೃತಿ, ಸಮಾವೇಶ ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿದೆ.

**ನಮ್ಮ ನಡಿಗೆ ಸಮತೆಯೆಡೆಗೆ**

ಲಾಭ ದೋಚುವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕೀಯ–ಧರ್ಮ–ಜಾತಿವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆಯು ಧರ್ಮ/ಕೋಮು/ಜಾತಿ ವೈಷಮ್ಯದ ದಾಳವಾಗಿ ಬಳಕೆಯಾಗುತ್ತಿದ್ದಾಳೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣುಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳಿಗೆ ಕಾರಣವಾಗಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಮಹಿಳಾ ವಿಷಯಕ್ಕೆ ಮಾತಿನಲ್ಲಷ್ಟೇ ಮನ್ನಣೆ ನೀಡಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಧಾನತೆ, ಮತಾಂಧತೆ ಮತ್ತು ಇದಕ್ಕೆಲ್ಲ ಪೂರಕವಾಗಿ ಅಧಿಕಾರ ರಾಜಕಾರಣ ರೂಪಿಸುತ್ತಿರುವ ದ್ವೇಷ ರಾಜಕಾರಣವು ಹಿಂಸೆಯನ್ನು ಹುಟ್ಟುಹಾಕುತ್ತಿದೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಎದುರಿಸಲು ಮಹಿಳೆಯರು ಮತ್ತು ಸಮಸಮಾಜ ಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ

ತುರ್ತು ಹಿಂದೆಂದಿಗಿಂತ ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ. ಎಂದೇ **'ಸಮತೆಯೆಡೆಗೆ ನಮ್ಮ ನಡಿಗೆ'** ನಮ್ಮ ಧ್ಯೇಯವಾಕ್ಯವಾಗಿದೆ.

ಇಂಥ ಆಶಯಗಳ ಹೊತ್ತು ಒಕ್ಕೂಟವು ಈ ಬಾರಿ ಕೋಲಾರ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಕೊರೋನ ಹುಟ್ಟಿಸಿದ ತಲ್ಲಣವು ನಮ್ಮ ಚೈತನ್ಯವನ್ನು ಕುಗ್ಗಿಸದೇ ಕೋಲಾರದ ಎಲ್ಲಾ ತಾಲೂಕುಗಳಲ್ಲೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರೇರೇಪಿಸಿದೆ.

**ಹಲವು ವಿಶೇಷಗಳ ತವರು ಕೋಲಾರ**

ಕನ್ನಡ, ತೆಲುಗು, ತಮಿಳು ಮತ್ತು ಉರ್ದು – ಹೀಗೆ ನಾಲ್ಕು ಭಾಷೆಗಳ ಊರಾದ ಕೋಲಾರ ಜಿಲ್ಲೆಗೆ ತನ್ನದೇ ಆದ ವಿಶೇಷತೆಯಿದೆ. ಕೈವಾರ ನಾರಾಯಣ ತಾತ, ಬೆಟ್ಟಳ್ಳಿ ಆಂಜನಪ್ಪ, ತಾವರೆಕೆರೆ ರಾಮಾವಧೂತ, ಬೇರಿಕಿ ಪುಟ್ಟಪ್ಪರಂತಹವರು ಹುಟ್ಟುಹಾಕಿದ ಜೀವಪರ ಅಧ್ಯಾತ್ಮಿಕ ಪರಂಪರೆಗಳು, ಬುದ್ಧನ ಸಮಕಾಲೀನನಾದ ಮಕ್ಕಲಿ ಗೋಸಾಲ ಸ್ಥಾಪಿಸಿದ್ದ ಆಜೀವಕ ಧರ್ಮಗಳಿಗೆ ನೆಲೆಯಾಗಿದೆ. ಆವನಿ, ಕೋಲಾರ ಮತ್ತು ಮಡಿವಾಳಗಳು 15ನೇ ಶತಮಾನದವರೆಗೂ ಆಜೀವಕ ಧರ್ಮದ ಕೇಂದ್ರಗಳಾಗಿದ್ದವು. ಆ ಧರ್ಮಕ್ಕೆ ಸಂಬಂಧಪಟ್ಟ 17 ಶಾಸನಗಳಲ್ಲಿ 8 ಶಾಸನಗಳು ಕೋಲಾರದಲ್ಲಿ ದೊರೆತಿವೆ. ಅಲ್ಲಿ ದೊರೆತಿರುವ ಸುಮಾರು 8ನೇ ಶತಮಾನದ ಪ್ರಾಚೀನ ಶಾಸನದಲ್ಲಿ ಸಾಯಿ ನಿರ್ಮದಿ ಎಂಬ ಓದುತ್ತಿರುವ ಮತ್ತು ಬರೆಯುತ್ತಿರುವ ಪಂಡಿತಳ ಚಿತ್ರವಿದ್ದು ಅದು ಆ ಕಾಲದಲ್ಲೇ ವಿದ್ವಾಂಸಳಾಗಿದ್ದ ಮಹಿಳೆಯ ಕುರುಹಾಗಿದೆ. ಅತ್ಯಂತ ಪ್ರಾಚೀನ ಬಂಡೆ ಕೆಜಿಎಫ್‌ನಲ್ಲಿ ದೊರೆತಿದೆ. ನಾಡಿನ ದಲಿತ ಸಮುದಾಯಕ್ಕೆ ಸ್ವಾಭಿಮಾನದ ಹಿರಿಮೆ ನೀಡಿದ ದಲಿತ ಸಂಘರ್ಷ ಸಮಿತಿ, ಅಹಿಂದ (ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು) ಹೋರಾಟವು ಹುಟ್ಟಿದ ಊರಾಗಿದೆ. ಹುಣಸಿಕೋಟೆ ಅನುಸೂಯಮ್ಮ ಮುನ್ನಡೆಸಿದ ಕೋಲಾರ–ಬೆಂಗಳೂರು ಜಾಥ ದಲಿತ ಹೋರಾಟದ ಐತಿಹಾಸಿಕ ಮೈಲಿಗಲ್ಲಾಗಿದೆ. ಇಲ್ಲಿನ 'ಜೋಡಿ ಇನಾಮು ರದ್ದತಿ ಹೋರಾಟ' ಕಾಗೋಡು ಸತ್ಯಾಗ್ರಹದಷ್ಟೇ ಪ್ರಮುಖ ಭೂ ಹೋರಾಟವಾಗಿದೆ. ಉತ್ತನೂರು ರಾಜಮ್ಮ ವಿ. ಶೆಟ್ಟಿ, ಗುಡಿಬಂಡೆ ಪೂರ್ಣಿಮಾ, ಹೆಚ್. ಜಿ. ರಾಧಾದೇವಿ, ಸಾಯಿಸುತೆ ಅವರಂತಹ ಪ್ರಮುಖ ಸಾಹಿತಿಗಳನ್ನು ಕನ್ನಡ ಪರಂಪರೆಗೆ ನೀಡಿದೆ.

"ಆವನಿ ಬೆಟ್ಟದ ಮೇಲೆ ಆರು ಹನಿ ಮಳೆ/ಮುಳುಬಾಗಿಲ ಬೆಟ್ಟದ ಮೇಲೆ ಮೂರು ಹನಿ ಮಳೆಬಿದ್ದು/ಕೋಲಾರದ ಕೆರೆಗಳಲ್ಲಿ ಕೋಡಿ ಹರಿತು.. .." ಎಂಬ ಜಾನಪದ ಗೀತೆ ಕೋಲಾರದ ನೀರಿನ ನಿಜ ಕತೆ ಹೇಳುತ್ತದೆ. ಪಾಲಾರ್ ಮತ್ತು ಚಿತ್ರಾವತಿ ಮಳೆಗಾಲದಲ್ಲಿ ಹರಿವ ನದಿಗಳು. ಮಳೆ ಕಡಿಮೆ ಬೀಳುವ ಕೋಲಾರವು ಒಣ ಬೇಸಾಯವೇ ಪ್ರಧಾನವಾಗಿದ್ದರೂ ಕರ್ನಾಟಕದ ತರಕಾರಿ ಬುಟ್ಟಿ ಎಂಬ ಬಿರುದು ಪಡೆದಿದೆ. ಇತರ ತರಕಾರಿಗಳ ಜೊತೆಗೆ ಹೆಚ್ಚಿನ ನೀರು ಬೇಡುವ ಆಲೂಗಡ್ಡೆ, ಟೊಮೆಟೊ, ಹಿಪ್ಪು ನೇರಳೆಸೊಪ್ಪು, ದನಗಳ ಮೇವನ್ನು ಯಥೇಚ್ಛವಾಗಿ ಬೆಳೆಯಲು ಸಾಧ್ಯವಾಗಿರುವುದು ಅಲ್ಲಿನ ಕೆರೆಗಳಿಂದಾಗಿ. ಕರ್ನಾಟಕದಲ್ಲೇ ಅತಿಹೆಚ್ಚು ಕೆರೆಗಳನ್ನು ಹೊಂದಿರುವ ಜಿಲ್ಲೆ ಕೋಲಾರ. ಪ್ರತಿಯೊಂದು ಕೆರೆಯನ್ನು ದುಗ್ಗಲ್ಲಮ್ಮ, ಚೌಡಿಯಂತಹ ಹೆಣ್ಣು ದೇವತೆಗಳು ಜತನದಿಂದ ಕಾಯುವವರೆಂಬ ನಂಬಿಕೆ ಇದೆ. ಹಾಗಾಗಿಯೇ ಖ್ಯಾತ ಚಿಂತಕ ಮತ್ತು ಲೇಖಕ ಕೋಟಿಗಾನಹಳ್ಳಿ ರಾಮಯ್ಯನವರು ಕೋಲಾರವನ್ನು ನೆಲದೇವತೆಗಳ ನಾಡೆಂದು ಕರೆದಿದ್ದಾರೆ. ಹಾಲು, ರೇಷ್ಮೆ ಮತ್ತು ಚಿನ್ನದ ಗಣಿಗಾಗಿ ಪ್ರಸಿದ್ಧಿ ಪಡೆದ ಕೋಲಾರ ಸಂತೆಗಳಿಗೂ ಪ್ರಸಿದ್ಧವಾಗಿದೆ. ಹಲವು ತರಹದ, ರುಚಿಯಾದ ಮಾವಿನಹಣ್ಣುಗಳನ್ನು ಬೆಳೆಯುವ ಶ್ರೀನಿವಾಸಪುರದಲ್ಲಿ ಮಾವಿನಹಣ್ಣಿನ ಬಹುದೊಡ್ಡ ಸಂತೆ ನಡೆಯುತ್ತದೆ.

ಇಂತಹ ಕೋಲಾರದ ನೆಲದಲ್ಲಿ ಒಕ್ಕೂಟವು ಈ ಬಾರಿ **'ಪಡೆಯದೆ ಬಿಡೆವು ಬೆವರಿಗೆ ಬೆಲೆ, ನೆಲೆ; ಕತ್ತರಿಸಲು ಬಿಡೆವು ಸತ್ಯದ ನಾಲಿಗೆ'** ಎಂಬ ಘೋಷವಾಕ್ಯ ಇಟ್ಟುಕೊಂಡು ಮಾರ್ಚ್ 1– 8 ರವರೆಗೆ ಮಹಿಳಾ ದಿನಾಚರಣೆ ಸಪ್ತಾಹವನ್ನು ಹಮ್ಮಿಕೊಂಡಿದೆ.

**ಕಾರ್ಯಕ್ರಮ ವಿವರ:**

**'ಅರಿವಿನ ಪಯಣ'ದ ಸಪ್ತಾಹ**

| ಸಂ. | ದಿನಾಂಕ | ತಾಲೂಕು | ಸ್ಥಳ | ಸಮಯ | ಅತಿಥಿಗಳು | ಸಂಪನ್ಮೂಲ ವ್ಯಕ್ತಿಗಳು | ಅಧ್ಯಕ್ಷತೆ |
|---|---|---|---|---|---|---|---|
| 1 | 01.03.2021 | ಕೆಜಿಎಫ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 11-12.30 | ಫ್ಲೋರಾ, ಜನವಾದಿ ಮಹಿಳಾ ಸಂಘಟನೆ | ಎನ್. ಗಾಯತ್ರಿ ಖ್ಯಾತ ಚಿಂತಕರು | ಪ್ರಾಂಶುಪಾಲರು ಸ.ಪ್ರ.ದ ಕಾಲೇಜು |
| | | | | | | ಎನ್. ಗಾಯತ್ರಿ ಖ್ಯಾತ ಚಿಂತಕರು | ಪ್ರಾಂಶುಪಾಲರು ಸ.ಪ್ರ.ದ ಕಾಲೇಜು |

| | | | | | | | |
|---|---|---|---|---|---|---|---|
| 2 | 02.03.2021 | ಬಂಗಾರಪೇಟೆ | ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು | 10.30-12 | ಪ್ರಭಾವತಿ ಚಿಗುರು ಸಂಸ್ಥೆ | ಹಾ. ಮ. ರಾಮಚಂದ್ರ, ಆದಿಮ ಸಾಂಸ್ಕೃತಿಕ ಕುಟೀರ | ಪ್ರಾಂಶುಪಾಲರು ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು |
| | | ಬಂಗಾರಪೇಟೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 12.30-4 | ನಾಗರತ್ನಮ್ಮ, ಸಿಐಟಿಯು ಕಾರ್ಮಿಕ ಸಂಘಟನೆ | ಅಖಿಲಾ ವಿದ್ಯಾಸಂದ್ರ, ವಕೀಲರು, ಬೆಂಗಳೂರು | ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು |
| 3 | 03.03.2021 | ಶ್ರೀನಿವಾಸಪುರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 11-2.30 | ಪದ್ಮ, ಸಫಾಯಿ ಕರ್ಮಚಾರಿ ಕಾವಲು ಸಮಿತಿ | ಹೆಚ್.ಎನ್. ಆರತಿ, ಖ್ಯಾತ ಕವಯಿತ್ರಿ | ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು |
| 4 | 04.03.2021 | ಮಾಲೂರು | ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು | 1-3.30 | ಮಮತಾ ರೆಡ್ಡಿ, ಮಹಿಳಾ ಸಾಂತ್ವನ ಕೇಂದ್ರ | ಗೌರಿ, ಕರ್ನಾಟಕ ಜನಶಕ್ತಿ, /ನವ್ಯಾ ಕಡಮೆ ಖ್ಯಾತ ಛಾಯಗ್ರಾಹಕರು | ಪ್ರಾಂಶುಪಾಲರು ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು |
| 5 | 05.03.2021 | ಮುಳುಬಾಗಿಲು | ಶಾರದ ಪ್ರಥಮ ದರ್ಜೆ ಮಹಿಳಾ ಕಾಲೇಜು | 11-12 | ಗೀತಾ ರಾಜ್ಯ ಉಪಾಧ್ಯಕ್ಷರು ಜನವಾದಿ ಮಹಿಳಾ ಸಂಘಟನೆ | ಮನ್ಸೋರೆ ಖ್ಯಾತ ಸಿನಿಮಾ ನಿರ್ದೇಶಕರು | ಪ್ರಾಂಶುಪಾಲರು ಶಾರದ ಪ್ರಥಮ ದರ್ಜೆ ಮಹಿಳಾ ಕಾಲೇಜು |
| | 05.03.2021 | ಮುಳುಬಾಗಿಲು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 12.30-2.00 | ನಳಿನಿ, ರೈತ ಹೋರಾಟಗಾರ್ತಿ, ಕೋಲಾರ | ಮನ್ಸೋರೆ ಖ್ಯಾತ ಸಿನಿಮಾ ನಿರ್ದೇಶಕರು | ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು |
| 6 | 06.03.2021 | ಕೋಲಾರ | ಪತ್ರಕರ್ತರ ಭವನ ಕೋಲಾರ | | ಜೆ.ಜಿ.ನಾಗರಾಜ್ ಅಧ್ಯಕ್ಷರು ಪ.ಪೂ.ಕನ್ನಡ ಉಪನ್ಯಾಸಕರ ಸಂಘ | ಸಿ.ಜಿ.ಮಂಜುಳಾ ಖ್ಯಾತ ಪತ್ರಕರ್ತರು | ಪದ್ಮಾಲಯ ನಾಗರಾಜ್ ಸಂಸ್ಕೃತಿ ಚಿಂತಕರು ಕೋಲಾರ |

**07.03.2021**

**ಬೆಳಗ್ಗೆ 10.30: ಪುಸ್ತಕ ಬಿಡುಗಡೆ:**

**'ಘನತೆಗಾಗಿ ಸಹಸ್ರಮಾನದ ಹೋರಾಟ'**–ಕರ್ನಾಟಕದಲ್ಲಿ ಮಲಬಾಚುವ ಪದ್ಧತಿ ಕುರಿತು ಪಿಯುಸಿಎಲ್ ಅಧ್ಯಯನ ವರದಿ

**ಪ್ರಸ್ತಾವನೆ:**

**ಪುಸ್ತಕ ಬಿಡುಗಡೆ**–ಕೋಟಿಗಾನಹಳ್ಳಿ ರಾಮಯ್ಯ, ಖ್ಯಾತ ಲೇಖಕರು ಹಾಗೂ ಸಂಸ್ಕೃತಿ ಚಿಂತಕರು

**ಅಧ್ಯಕ್ಷತೆ**–ಸಿ.ಎಂ.ಮುನಿಯಪ್ಪ ಸಂಪಾದಕರು, ಸಂಚಿಕೆ ಪತ್ರಿಕೆ

**ಸ್ಥಳ: ಕೋಲಾರ ಡಿಸಿಸಿ ಬ್ಯಾಂಕ್ ಹಾಲ್, ಟಿ.ಚೆನ್ನಯ್ಯ ರಂಗಮಂದಿರದ ಹಿಂಭಾಗ**

**ಸಂಜೆ 6 ಗಂಟೆಗೆ: ಕಪ್ಪು ಉಡುಪಿನಲ್ಲಿ ಮಹಿಳೆಯರು**

**ಸ್ಥಳ: ಮೆಕ್ಕೆ ಸರ್ಕಲ್ ಕೋಲಾರ**

**08.03/2021 ವಿಚಾರ ಸಂಕಿರಣ**

**ವರ್ತಮಾನದ ಮಹಿಳಾ ಬಿಕ್ಕಟ್ಟುಗಳು**

**'ಸಾವಿ ನಿರ್ಮದಿ ವೇದಿಕೆ'**

**ಬೆಳಗ್ಗೆ 10–30**

**ಉದ್ಘಾಟನೆ:** ಶಾಂತಮ್ಮ ಮತ್ತು ಇತರ ಹಿರಿಯ ಮಹಿಳಾ ಚಳುವಳಿಗಾರರಿಂದ

**ಸ್ವಾಗತ:** ಗೀತಾ ಜನವಾದಿ ಮಹಿಳಾ ಸಂಘಟನೆ

**ಪ್ರಸ್ತಾವನೆ:** ಡಾ. ಎಚ್. ಎಸ್. ಅನುಪಮಾ

**ಒಕ್ಕೂಟ ವೆಬ್‌ಸೈಟ್‌ಗೆ ಚಾಲನೆ:** ಒಕ್ಕೂಟದ ಯುವಸಂಗಾತಿಗಳಿಂದ

**ದಿಕ್ಸೂಚಿ ಭಾಷಣ:** ಬಿಟ್ಟೂ ಕಾರ್ತಿಕ್, ವಿಜ್ಞಾನಿ ಮತ್ತು ಸಾಮಾಜಿಕ ಕಾರ್ಯಕರ್ತರು

**'ಗಟ್ಟಿ ದನಿ, ದಿಟ್ಟ ನಡೆ'** – ಮಂಡ್ಯ ಮಹಿಳಾ ದಿನಾಚರಣೆ 2020ರ ನೆನಪಿನ ಹೊತ್ತಗೆ ಬಿಡುಗಡೆ

**ಪುಸ್ತಕ ಕುರಿತು:** ಸುನಂದಾ ಕಡಮೆ, ಧಾರವಾಡ

**ವಿಚಾರ ಸಂಕಿರಣ: ಮಧ್ಯಾಹ್ನ 2ರಿಂದ 5**

**ಕೃಷಿ ಬಿಕ್ಕಟ್ಟು ಮತ್ತು ಮಹಿಳೆ:** ಚುಕ್ಕಿ ನಂಜುಂಡಸ್ವಾಮಿ, ರೈತ ಹೋರಾಟಗಾರ್ತಿ

**ದಲಿತ ಮಹಿಳೆಯರ ಮೇಲಿನ ದೌರ್ಜನ್ಯ:** ಡಾ. ಕೆ. ವಿ. ನೇತ್ರಾವತಿ, ಬರಹಗಾರರು, ಸಾಮಾಜಿಕ ಕಾರ್ಯಕರ್ತೆ

**ಕೊರೋನಾ ಕಾಲದ ವಲಸೆ ಮಹಿಳಾ ಕಾರ್ಮಿಕರ ಸಂಕಷ್ಟಗಳು:** ಜ್ಯೋತಿ. ಎ, ರಾಜ್ಯಾಧ್ಯಕ್ಷರು, ಭಾರತೀಯ ಮಹಿಳಾ ಒಕ್ಕೂಟ

**ನಿರೂಪಣೆ:** ತ್ರೇಜೋವತಮ್ಮ, ದಿ ಸನ್ ಶೈನ್ ಟ್ರಸ್ಟ್

**ವಂದನೆ:** ವಿನೋದ, ವಿಮೋಚನ.

––

**ನಮ್ಮ ಹಕ್ಕೊತ್ತಾಯಗಳು :**

- ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು. ಜಾತಿ ಹೆಸರಿನಲ್ಲಿ ನಡೆಯುವ ದಲಿತ ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯಗಳು ಕೊನೆಯಾಗಬೇಕು. ಸತ್ಯವನ್ನು ತಿರುಚುವ ಪ್ರಯತ್ನಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು.
- ಮಲಬಾಚುವ ಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗಳಿಸಬೇಕು. ಪೌರ ಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು, ಮ್ಯಾನ್‌ಹೋಲ್ ಮತ್ತು ಮಲದಗುಂಡಿಗಳ ಸ್ವಚ್ಛತೆಯ ಯಾಂತ್ರೀಕರಣ, ಶೌಚಾಲಯ ಮತ್ತು ಒಳಚರಂಡಿ ನಿರ್ಮಾಣ, ನೀರು ಪೂರೈಕೆಗಳನ್ನು ಕಾಲಮಿತಿಯೊಳಗೆ ನಡೆಸಲು ಕ್ರಿಯಾಯೋಜನೆ ರೂಪಿಸಬೇಕು.
- ಸರ್ಕಾರ ರಚನೆ ಮತ್ತು ರಾಜಕೀಯರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮಹಿಳಾ ಮೀಸಲಾತಿ ಕಡ್ಡಾಯವಾಗಿ ಜಾರಿಯಾಗಬೇಕು. ಅರ್ಥಪೂರ್ಣ ಮಹಿಳಾ ನಾಯಕತ್ವ ಬೆಳೆಸಲು ಅವಕಾಶ ಮಾಡಿಕೊಡಬೇಕು.

- ಹೆಣ್ಣು ಭ್ರೂಣಹತ್ಯೆ, ಆ್ಯಸಿಡ್ ದಾಳಿ, ಅತ್ಯಾಚಾರ, ಬಾಲ್ಯವಿವಾಹ, ಗುಜ್ಜರ್ ಮದುವೆ ಮೊದಲಾದ ಲಿಂಗಸಂಬಂಧಿ ದೌರ್ಜನ್ಯಗಳು ಕೊನೆಯಾಗಬೇಕು. ಅಶ್ಲೀಲ ಸಾಹಿತ್ಯ, ಸಿನಿಮಾ, ಜಾಲತಾಣಗಳನ್ನು ನಿಷೇಧಿಸಬೇಕು. ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ, ಗೌರವಯುತವಾಗಿ ಕಾಣುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು. ತಾಯ್ತನ ಮರಣ, ಶಿಶು ಮರಣವನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು.
- ಲಿಂಗಸೂಕ್ಷ್ಮತೆ ಬೆಳೆಸುವಂತಹ ಪಠ್ಯಕ್ರಮ, ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿಯಾಗಬೇಕು. 12–18ರವರೆಗಿನ ಹೆಣ್ಣುಮಕ್ಕಳ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಶಾಲಾಕಾಲೇಜುಗಳಿಗೆ ಉತ್ತಮ ಗುಣಮಟ್ಟದ, ಪರಿಸರಸ್ನೇಹಿ ಉಚಿತ ನ್ಯಾಪ್ಕಿನ್‌ಗಳನ್ನು ಸರ್ಕಾರ ಪೂರೈಸಬೇಕು ಹಾಗೂ ಮತ್ತದರ ವಿಲೇವಾರಿಗೆ ವ್ಯವಸ್ಥೆ ಮಾಡಬೇಕು.
- ದೇವದಾಸಿ ಪದ್ಧತಿ ಕೊನೆಗೊಳ್ಳಬೇಕು. ಅವರಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ ಮತ್ತು ಉದ್ಯೋಗ ದೊರಕಿಸಿಕೊಡಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು.
- ಮಹಿಳೆಯರಿಗೆ ಉಚಿತ ಸಾರ್ವಜನಿಕ ಶೌಚಾಲಯ ತೆರೆಯಬೇಕು. ಮುಟ್ಟಿನ ಹೆಸರಿನಲ್ಲಿ ಮಹಿಳೆಯರ ಹೊರಗಿಡುವ, ಶೋಷಿಸುವಂತಹ ಮೌಢ್ಯಾಚರಣೆಗಳು ನಿಲ್ಲಬೇಕು.
- 1984ರಲ್ಲಿ ಆದೇಶವಾಗಿರುವ ಶೇ. 33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳ್ಳಬೇಕು. ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
- ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು.
- ವಲಸೆ ಕಾರ್ಮಿಕರಿಗೆ ಬದುಕುವ ವೇತನ ಮತ್ತು ಸುಭದ್ರ ನೆಲೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗಾವಕಾಶಗಳು ಗ್ರಾಮೀಣ ಹಾಗೂ ಸಣ್ಣ ಪಟ್ಟಣ ಪ್ರದೇಶಗಳಲ್ಲೂ ರೂಪುಗೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.
- ಗಾರ್ಮೆಂಟ್ಸ್ ನೌಕರರು, ಅಂಗನವಾಡಿ–ಬಿಸಿಯೂಟ–ಆಶಾ ಕಾರ್ಯಕರ್ತೆಯರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರಿಗೆ ಬದುಕುವ ವೇತನ, ಲೈಂಗಿಕ ಕಿರುಕುಳ ಮುಕ್ತ ಆರೋಗ್ಯಕರ ಕೆಲಸದ ವಾತಾವರಣ ಸಿಗಲೇಬೇಕು.
- ಸರ್ಕಾರಿ ಸಂಸ್ಥೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಸ್ವರೂಪದಲ್ಲಿ ಅಸ್ಪೃಶ್ಯತೆ ಕೊನೆಗೊಳ್ಳಬೇಕು. ಅಸ್ಪೃಶ್ಯತೆಯನ್ನು ತಡೆಯಲು ಪರಿಣಾಮಕಾರಿ, ಪರಿವರ್ತನಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
- ಮದ್ಯವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ.
- ಕೃಷಿಭೂಮಿಯನ್ನು ರೈತರಿಂದ, ಆದಿವಾಸಿಗಳಿಂದ ಬಲವಂತವಾಗಿ ಕಸಿದು ದಿಕ್ಕೇಡಿಗಳನ್ನಾಗಿಸುವಂತಹ ಅಭಿವೃದ್ಧಿ ಯೋಜನೆಗಳು, ಸುಗ್ರೀವಾಜ್ಞೆಗಳು, ಕಾಯ್ದೆಗಳು ಸಾಮಾಜಿಕ ಮರುಪರಿಶೀಲನೆಗೊಳಗಾಗಬೇಕು. ಕೃಷಿ ಭೂಮಿ ಉಳುವವರಿಗೆ ಸಿಗಲೇ ಬೇಕು. ಆದಿವಾಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯ ಕೊನೆಯಾಗಬೇಕು.
- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು. ಸಮಾನ ಶಿಕ್ಷಣ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ಶಿಕ್ಷಣ ಪದ್ಧತಿ ಜಾರಿಯಾಗಬೇಕು. ಸರ್ಕಾರ/ಸಾರ್ವಜನಿಕರ ಸಹಭಾಗಿತ್ವ ಮತ್ತು ಸಹಕಾರಿ ತತ್ತ್ವಗಳ ಸ್ವಾಮ್ಯತೆ ಜಾರಿಯಾಗಬೇಕು.
- ಪ್ಲಾಸ್ಟಿಕ್, ಅಣು ಮತ್ತು ವಿಷಕಾರಿ ತ್ಯಾಜ್ಯಗಳಿಂದ ಮುಕ್ತವಾದ ಆರೋಗ್ಯಕರ ಪರಿಸರವನ್ನು ಮುಂದಿನ ಪೀಳಿಗೆಗಾಗಿ ಉಳಿಸಲು ಜಾಗೃತಿ, ಸೂಕ್ತ ಕ್ರಮ ಕೈಗೊಳ್ಳಬೇಕು.

**ಸಹಭಾಗಿ ಸಂಘಟನೆಗಳು**

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ದಲಿತ ಕಲಾ ಮಂಡಳಿ ಗದಗ, ದಲಿತ ಬಹುಜನ ಚಳವಳಿ ಗದಗ, ವಿಮೋಚನ ಬೆಂಗಳೂರು, ವಿಮೆನ್ಸ್ ವಾಯ್ಸ್, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಲಿತ ದಮನಿತರ ಸ್ವಾಭಿಮಾನ ಹೋರಾಟ ಸಮಿತಿ, ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ–ದಕ್ಷಿಣ ಕನ್ನಡ, ಗಮನ ಮಹಿಳಾ ಸಮೂಹ, ಸಿಐಇಡಿಎಸ್, ದೇಶಕ್ಕಾಗಿ ನಾವು, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ಕರ್ನಾಟಕ ಪ್ರಾಂತ್ಯ ರೈತ ಸಂಘ, ಸ್ಪಂದನ ಮಂಡ್ಯ, ಗಾರ್ಮೆಂಟ್ಸ್ ಮಹಿಳಾ

ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು ಬೆಂಗಳೂರು, ವಿಮೋಚನ ಸಂಘ ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೊಗ್ರೆಸ್ಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ದಲಿತ ಬಹುಜನ ಚಳವಳಿ, ನ್ಯಾಶನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್ ಮುನ್ನಡೆ, ಸ್ತ್ರೀ ಜಾಗೃತ ಸಮಿತಿ, ಚರಕಾ ಮಹಿಳಾ ವಿವಿಧೋದ್ದೇಶ ಸಂಘ ಹೆಗ್ಗೋಡು, ಸಖೀ ಹೊಸಪೇಟೆ, ಎಸ್.ಎಫ್.ಐ., ಡಿವೈಎಫ್ಐ, ಎಐಟಿಯುಸಿ, ಸಿಐಟಿಯು, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಅನೇಕ ಬೆಂಗಳೂರು, ಜೀವ ಬೆಂಗಳೂರು, ಒಂದೆಡೆ ಬೆಂಗಳೂರು, ಸ್ವರಾಜ್ ನೆಟ್‌ವರ್ಕ್, ಯೂತ್ ಎಂಪವರ್ಡ್ ಇನ್ ಆಕ್ಷನ್ ಫಾರ್ ಕಮ್ಯುನಿಟಿ, ರೇಡಿಯೋ ಆಕ್ಟಿವ್ ಬೆಂಗಳೂರು, ಪ್ರಜಾ ರಾಜ್ಯ ವೇದಿಕೆ, ವಿಸ್ತಾರ್, ಜನಸಹಯೋಗ, ತರಿಕಿಟ ಕಲಾ ಕಮ್ಮಟ ಮಂಗಳೂರು, ಸಂಚಲನ ಕರ್ನಾಟಕ, ಸಂವಾದ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಸ್ಲಂ ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ. ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಟಿಯು, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಫೋರಂ ಫಾರ್ ವರ್ಕರ್ಸ್ ರೈಟ್ಸ್, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಭೂಮ್ತಾಯಿ ಬಳಗ ದೊಡ್ಡಬಳ್ಳಾಪುರ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ಸಬಲ ವಿಜಯಪುರ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಏಯ್ಡ್ಸ್ ಜಾಗೃತಿ ಮಹಿಳಾ ಸಂಸ್ಥೆ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಮಹಿಳಾ ಸಮಖ್ಯಾ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ ಕರ್ನಾಟಕ, ಸೇವಾ, ನವಜೀವನ ಮಹಿಳಾ ಒಕ್ಕೂಟ ರಾಯಚೂರು, ಮದ್ಯ ನಿಷೇಧ ಆಂದೋಲನ, ರಂಗಬೆಳಕು ತಂಡ ಶಿವಮೊಗ್ಗ, ಅಹರ್ನಿಶಿ ಪ್ರಕಾಶನ ಶಿವಮೊಗ್ಗ, ದಿ ಶಿವಮೊಗ್ಗ ಮಲ್ಟಿ ಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ, ನಿರಂತರ–ಶಿವಮೊಗ್ಗ, ಹೊಸ ಮನುಷ್ಯ ಪತ್ರಿಕಾ ಬಳಗ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ–ಶಿವಮೊಗ್ಗ, ಚಾರ್ವಾಕ ಪತ್ರಿಕಾ ಬಳಗ–ಸಾಗರ, ಸ್ಪಂದನ (ರಿ) ಸಾಗರ, ಯುವಕ ಯುವತಿಯರ ಸಂಘ – ಗಾಜನೂರು, ಜಾಗೃತ ಮಹಿಳಾ ಒಕ್ಕೂಟ, ಖಾನಾಪುರ.

**ಕೋಲಾರ ಸಂಘಟನೆಗಳು**

ಚಿಗುರು ಸಂಸ್ಥೆ –ಬಂಗಾರಪೇಟೆ, ದಿ ಸನ್‌ಶೈನ್ ಟ್ರಸ್ಟ್ ಕೋಲಾರ, ವಿಮೋಚನಾ–ಕೋಲಾರ, ವಿಮೋಚನಾ ಬೆಂಗಳೂರು, ಮಕ್ಕಳ ವಿಕಾಸ–ಕೆಜಿಎಫ್, ಮದರ್ ಲ್ಯಾಂಡ್ ಮಹಿಳಾ ಟ್ರಸ್ಟ್–ಕೆ.ಜಿ.ಎಫ್, ಮಹಿಳಾ ಸಂರಕ್ಷಣಾ ಕೇಂದ್ರ–ಕೋಲಾರ, ಸಫಾಯಿ ಕರ್ಮಚಾರಿ ಕಾವಲು ಸಮಿತಿ ಕರ್ನಾಟಕ–ಕೋಲಾರ, ದಲಿತ ಸಾಹಿತ್ಯ ಪರಿಷತ್, ಗಮನ ಮಹಿಳಾ ಸಮೂಹ ಮತ್ತು ಸಿಐಈಡಿಎಸ್, ಯಂಗ್ ಇಂಡಿಯಾ ಡೆವಲಪ್‌ಮೆಂಟ್ ಸೊಸೈಟಿ–ಕೋಲಾರ, ಫೋಕಸ್–ಬಂಗಾರಪೇಟೆ, ಜನವಾದಿ ಮಹಿಳಾ ಸಂಘಟನೆ–ಕೋಲಾರ, ಗ್ರಾಮೀಣ ಮಹಿಳಾ ಒಕ್ಕೂಟ– ಕೋಲಾರ, ರೈತ ಸಂಘ–ಕೋಲಾರ, ಮಹಿಳಾ ಜಾಗೃತಿ ವೇದಿಕೆ– ಕೋಲಾರ, ಜನಪದ ರಂಗ–ಕೋಲಾರ, ಸಮ್ಮಿಲನ–ಕೋಲಾರ, ಜನಪರ ಫೌಂಡೇಷನ್–ಕೋಲಾರ, ಸೌರ್ಣಭೂಮಿ ಫೌಂಡೇಷನ್, ಆದಿಮ ಸಾಂಸ್ಕೃತಿಕ ಕುಟೀರ, ಈ ನೆಲ–ಈ ಜಲ ಸಾಂಸ್ಕೃತಿಕ ಸಂಘಟನೆ, ಯುವ ಜಾಗೃತಿ ವೇದಿಕೆ –ಕೋಲಾರ, ದಲಿತ ಸಂಘರ್ಷ ಸಮಿತಿ–ಕೋಲಾರ, ಟ್ರೀಸ್–ಬಂಗಾರಪೇಟೆ, ರಾಜ್ಯ ಯುವ ಬರಹಗಾರರ ಒಕ್ಕೂಟ, ಊರುಗೋಲು, ಮಾಲೂರು, ಗರಿಕೆ –ಬಂಗಾರುಪೇಟೆ ಬೇರು–ಬೆವರು ಬಳಗ–ಚಿಂತಾಮಣಿ, ಮಹಿಳಾ ಸಮಖ್ಯಾ–ಕೋಲಾರ, ಮಹಿಳಾ ಸಂರಕ್ಷಣಾ ಸಮಿತಿ –ಕೋಲಾರ, ನೀಲಿಯಾನ–ಯಂಗ್ ಗರ್, ಸಂವಾದ–ಕೋಲಾರ, ಸಂಚಿಕೆ ಪತ್ರಿಕೆ,

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ.**

**ಕೋಲಾರದಲ್ಲಿ 2021, ಮಾರ್ಚ್ 1–8ರವರೆಗೆ ನಡೆವ ಸಪ್ತಾಹದಲ್ಲಿ ಭಾಗಿಯಾಗಿ.**

**ಸತ್ಯದ ನಾಲಿಗೆ ಕತ್ತರಿಸದಂತೆ ತಡೆಯೋಣ, ಬೆವರಿಗೆ ಬೆಲೆಯನ್ನು, ಇರಲು ನೆಲೆಯನ್ನು ಪಡೆದೇ ಪಡೆಯೋಣ, ಸಮತೆಯ ನಾಡ ಕಟ್ಟೋಣ.**

***ಸಂಪರ್ಕ ಸಂಖ್ಯೆ:*** *ನೇತ್ರಾವತಿ ಕೆ. ವಿ–* 8105576738 *ಶಾಂತಮ್ಮ–8453323424 ತ್ರೇಜೋವತಮ್ಮ–7760274140 ಗೀತಾ–9448446659 ವಿನೋದ–9591122485*